# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 14.01.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ಇಂದು ಹೊಸೂರು ಮುಖ್ಯರಸ್ತೆ (ಟಿ. ಮರಿಯಪ್ಪ ರಸ್ತೆ, ನಿಮ್ಹಾನ್ಸ್ ಹತ್ತಿರ)ಯಲ್ಲಿ ಬೃ.ಬೆಂ.ಮ.ಪಾಲಿಕೆ ಮತ್ತು ಬೆಂಗಳೂರು ಜಲಮಂಡಳಿಯ ಸಹಯೋಗದೊಂದಿಗೆ ನಡೆಯುತ್ತಿರುವ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಪರಿಶೀಲಿಸಿದರು.

ಸುಮಾರು 60 ವರ್ಷಗಳ ಹಳೆಯದಾದ ನೀರಿನ ಕೊಳಾಯಿಗಳಿಂದ ನೀರು ಸೋರಿಕೆಯಾಗಿ ಬೆಂಗಳೂರು ಜಲಮಂಡಳಿಯವರಿಗೆ ನಷ್ಟ ಉಂಟಾಗುತ್ತಿತ್ತು ಹಾಗೂ ರಸ್ತೆ ಕೂಡಾ ಹಾಳಾಗುತ್ತಿತ್ತು. ಇದರಿಂದ ದಿನಾಂಕ: 20.12.2010 ರಂದು ರಸ್ತೆ ಸಂಚಾರವನ್ನು ಸ್ಥಗಿತಗೊಳಿಸಿ, ಒಳಚರಂಡಿ ಮಂಡಳಿಯ ವತಿಯಿಂದ ಪೈಪ್‌ಗಳನ್ನು ರಸ್ತೆಗೆ ಅಳವಡಿಸಿ, ಸುಮಾರು 150 ಲಕ್ಷ ವೆಚ್ಚದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿದರು.

ಅಲ್ಲದೇ, ಕೆ.ಪಿ.ಟಿ.ಸಿ.ಎಲ್. ರವರು 220 KV - U.G. ಕೇಬಲ್‌ನ್ನು 1500 ಮೀ. ಉದ್ದಕ್ಕೆ ಸುಮಾರು ರೂ.18.00 ಕೋಟಿ ವೆಚ್ಚದ ಕಾಮಗಾರಿಯನ್ನು ದಿನಾಂಕ: 05.01.2011ರಂದು ಪ್ರಾರಂಭಿಸಿ, ಅದನ್ನು ದಿನಾಂಕ: 18.01.2011 ರಂದು ಪೂರ್ಣಗೊಳಿಸಲಾಗುವುದೆಂದು ಅಂದಾಜಿಸಲಾಗಿರುತ್ತದೆ.

ಸದರಿ ರಸ್ತೆಯು ಹೊಸೂರು ಮುಖ್ಯರಸ್ತೆಯ ನಿಮ್ಹಾನ್ಸ್ ಆಸ್ಪತ್ರೆಯ ಮುಂಭಾಗದಲ್ಲಿರುವುದರಿಂದ ಈ ರಸ್ತೆಯು ಪ್ರಮುಖ ರಸ್ತೆಯಾಗಿರುತ್ತದೆ. ಆದ್ದರಿಂದ ಸದರಿ ರಸ್ತೆಯಲ್ಲಿ ನಡೆಯುತ್ತಿರುವ ಕಾಮಗಾರಿಯನ್ನು ಶೀಘ್ರದಲ್ಲಿ ಪೂರ್ಣಗೊಳಿಸಬೇಕೆಂದು ಸ್ಥಳೀಯ ಪಾಲಿಕೆ ಸದಸ್ಯರಾದ ಶ್ರೀ ಉದಯಶಂಕರ್ ರವರು ಆಯುಕ್ತರಲ್ಲಿ ಮನವಿ ಮಾಡಿದರು.

ಬೆಂಗಳೂರು ಜಲಮಂಡಳಿ, ಕೆ.ಪಿ.ಟಿ.ಸಿ.ಎಲ್., ಬೆಂಗಳೂರು ನಗರ ಟ್ರಾಫಿಕ್ ಸಹಭಾಗಿತ್ವದೊಂದಿಗೆ ಈ ರಸ್ತೆ ಕಾಮಗಾರಿಯನ್ನು ಪಾಲಿಕೆಯಿಂದ ಸುಮಾರು ರೂ.250 ಲಕ್ಷಗಳ ವೆಚ್ಚದಲ್ಲಿ ರಸ್ತೆ ಕಾಮಗಾರಿಯನ್ನು ಒಂದು ವಾರದ ಒಳಗಾಗಿ ಪೂರ್ಣಗೊಳಿಸಿ, ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದೆಂದು ಪಾಲಿಕೆಯ ಆಯುಕ್ತರು ತಿಳಿಸಿದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**